**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ: ಕಸಂವಿ/ಅಧಿಸೂಚನೆ/ವಿ.ಮ.ವಿ.ಉ.ಪರೀಕ್ಷೆಗಳು/02/2015–16** **ದಿನಾಂಕ: 17.11.2015**

# ಅಧಿಸೂಚನೆ

**ವಿಷಯ: ಖಾಸಗಿ ಅಭ್ಯರ್ಥಿಗಳಿಂದ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

2015–16ನೇ ಸಾಲಿನಲ್ಲಿ ಬಿ.ಎ.ವಿದ್ವನ್ಮಧ್ಯಮಾ ಹಾಗೂ ಎಂ.ಎ.ವಿದ್ವದುತ್ತಮಾ ಪರೀಕ್ಷೆಗಳಿಗೆ ಹಾಜರಾಗಲು ಬಯಸುವ ಖಾಸಗಿ ಅಭ್ಯರ್ಥಿಗಳಿಂದ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಸಗಿ ಅಭ್ಯರ್ಥಿಗಳು ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆವೇದನಾ ಪತ್ರವನ್ನು ಸಲ್ಲಿಸಬೇಕು. (ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳನ್ನು ಹೊರತುಪಡಿಸಿ) ಹೊಸದಾಗಿ ನೋಂದಾಯಿಸುವ ಖಾಸಗಿ ಅಭ್ಯರ್ಥಿಗಳು ಕಾಲೇಜಿನ ಮೂಲಕ ಆವೇದನ ಪತ್ರವನ್ನು ಸಲ್ಲಿಸುವಂತಿಲ್ಲ.

## *ಖಾಸಗಿ ಅಭ್ಯರ್ಥಿಗಳ ಪ್ರವೇಶನಿಯಮ*

***ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ***

***ಪಾಠ್ಯಕ್ರಮದ ಅವಧಿ*** – 3 ವರ್ಷಗಳು

***ಪ್ರವೇಶಾರ್ಹತೆ***

ಸಂಸ್ಕೃತ 'ಸಾಹಿತ್ಯ' ಪರೀಕ್ಷೆಯ ಎಲ್ಲ ಭಾಗಗಳಲ್ಲಿ ಉತ್ತೀರ್ಣತೆ

***ಅಥವಾ***

ಪ್ರಾಕ್‌ಶಾಸ್ತ್ರಿ / ಪ್ರಾಕ್‌ಶಿರೋಮಣಿ / ಉತ್ತರಮಧ್ಯಮಾ / ಮಧ್ಯಮಾ / ಉಪಶಾಸ್ತ್ರಿ ಅಥವಾ ತತ್ಸಮಾನವಾದ ಅಧಿಕೃತ ಪರೀಕ್ಷಾಮಂಡಲಿ ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣತೆ

***ಅಥವಾ***

ಪಿಯುಸಿ (ಇಂಟರ್‌ಮೀಡಿಯೆಟ್/12ನೇ ತರಗತಿ) ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ.

***ಅಥವಾ***

ಪಿಯುಸಿ (ಇಂಟರ್‌ಮೀಡಿಯೆಟ್/12ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮಾ / ಸಂಸ್ಕೃತ ಕೋವಿದ / ಸಂಸ್ಕೃತ ದ್ವಿತೀಯದೀಕ್ಷಾ /ಸಂಸ್ಕೃತ ವಿಚಕ್ಷಣ / ಆಗಮಪ್ರವೀಣ – ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ.

***ಅಥವಾ***

ಯಾವುದೇ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ.

***ಅಥವಾ***

ಯಾವುದೇ ವಿಶ್ವವಿದ್ಯಾಲಯದ ಎಂಎ ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಡನೆ ಉತ್ತೀರ್ಣತೆ.

***ಅಥವಾ***

ಬಿಎ ಇಂಟಿಗ್ರೇಟೆಡ್ ಕನ್ನಡ ಪಂಡಿತ ಮಧ್ಯಮ ಪದವಿಯಲ್ಲಿ ಉತ್ತೀರ್ಣತೆ.

***ಅಥವಾ***

ಪಿಯುಸಿ (ಇಂಟರ್‌ಮೀಡಿಯೆಟ್/12ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುವ ಪ್ರವೇಶಪರೀಕ್ಷೆಯಲ್ಲಿ ಉತ್ತೀರ್ಣತೆ.

***ಎಂ.ಎ. ಸಂಸ್ಕೃತ ವಿದ್ವದುತ್ತಮಾ***
***ಪಾಠ್ಯಕ್ರಮದ ಅವಧಿ*** – 2 ವರ್ಷಗಳು
***ಪ್ರವೇಶಾರ್ಹತೆ***

1. ಸಂಬಂಧಿಸಿದ ಶಾಸ್ತ್ರ/ವೇದಭಾಗದಲ್ಲಿ, ***ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ*** ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ.
2. ಬಿ.ಎ (ಸಂಸ್ಕೃತ–ಒಂದು ಭಾಷೆಯಾಗಿ) ಎಂ. ಎ. ಸಂಸ್ಕೃತ ಉತ್ತೀರ್ಣತೆ ಇದ್ದಲ್ಲಿ ಅಥವಾ ಬೇರೆ ಶಾಸ್ತ್ರಭಾಗದಲ್ಲಿ ವಿದ್ವನ್ಮಧ್ಯಮಾ / ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ಯಾವುದೇ ಶಾಸ್ತ್ರದಲ್ಲಿ ಪ್ರವೇಶ ಪಡೆಯಬಹುದು.
3. ಖಾಸಗಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ನೇರವಾಗಿ ಪರೀಕ್ಷೆಗಾಗಿ ಆವೇದನಪತ್ರವನ್ನು ಸಲ್ಲಿಸಬೇಕು. ಪ್ರವೇಶ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದಲ್ಲಿ ಪ್ರಧಾನ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗುವುದು. ಯಾವುದೇ ಕಾಲೇಜಿನ ಮೂಲಕ ಖಾಸಗಿ ಅಭ್ಯರ್ಥಿಗಳ ಆವೇದನವನ್ನು ಸ್ವೀಕರಿಸುವುದಿಲ್ಲ.
4. ಯಾವುದೇ ಒಂದು ಶಾಸ್ತ್ರದಲ್ಲಿ ವಿದ್ವದುತ್ತಮಾ ಅಥವಾ ತತ್ಸಮಾನ ಶಾಸ್ತ್ರೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲಿ ನೇರವಾಗಿ ಇನ್ನೊಂದು ಶಾಸ್ತ್ರದ ವಿದ್ವದುತ್ತಮಾ ಮೊದಲ ವರ್ಷದಲ್ಲಿ ಪ್ರವೇಶ ಪಡೆಯಬಹುದು.

## ***ವೇದ ವಿಭಾಗದ ಪದವಿಗಳಲ್ಲಿ ಪ್ರವೇಶಾರ್ಹತೆ***

***ಬಿ.ಎ. ವೇದ ವಿದ್ವನ್ಮಧ್ಯಮಾ***

1. ವೇದ ಮೂಲ ಪರೀಕ್ಷೆಯಲ್ಲಿ ಉತ್ತೀರ್ಣತೆ.
2. ಪಿ.ಯು.ಸಿ.ಯಲ್ಲಿ ಸಂಸ್ಕೃತ ಭಾಷೆಯನ್ನು ಐಚ್ಛಿಕವಾಗಿ ಓದಿ ವೇದಮೂಲದ ಜ್ಞಾನವನ್ನು ಹೊಂದಿರಬೇಕು ಮತ್ತು ಈ ಸಂಬಂಧ ವೇದ ಪಾಠಶಾಲೆಯ ಅಥವಾ ಸಾಂಪ್ರದಾಯಿಕ ವೇದ ಪಂಡಿತರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.
3. ಸಂಸ್ಕೃತ ಸಾಹಿತ್ಯ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೇದ ಮೂಲದ ಜ್ಞಾನವನ್ನು ಹೊಂದಿರಬೇಕು ಮತ್ತು ಈ ಸಂಬಂಧ ವೇದ ಪಾಠಶಾಲೆಯ ಅಥವಾ ಸಾಂಪ್ರದಾಯಿಕ ವೇದ ಪಂಡಿತರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.
4. ರಾಷ್ಟ್ರೀಯ ಸ್ತರದ ಮಾನ್ಯತೆಯನ್ನು ಪಡೆದ ವೇದ ಶಾಲೆಯಲ್ಲಿ ಸಂಸ್ಕೃತ ಭಾಷೆಯಲ್ಲಿ ವೇದ ಮೂಲ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

***ಎಂ.ಎ. ವೇದ ವಿದ್ವದುತ್ತಮಾ***

1. ವೇದ ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು **ಅಥವಾ** ಸಂಸ್ಕೃತ ಭಾಷೆಯೊಂದಿಗೆ ಸಂಬಂಧಿತ ವೇದ ವಿದ್ವನ್ಮಧ್ಯಮಾ ಪರೀಕ್ಷೆಗೆ ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
2. ಯಾವುದೇ ಶಾಸ್ತ್ರದಲ್ಲಿ / ಸಂಸ್ಕೃತದಲ್ಲಿ ಸ್ನಾತಕ(ಬಿ.ಎ) / ಸಂಸ್ಕೃತ ಸ್ನಾತಕೋತ್ತರ(ಎಂ.ಎ) ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಮತ್ತು ವೇದ ಕ್ರಮಾಂತ ಅಧ್ಯಯನವನ್ನು ಮಾಡಿದ ಪ್ರಮಾಣ ಪತ್ರವನ್ನು ಯಾವುದೇ ರಾಷ್ಟ್ರಸ್ತರದ ವೇದ ಪಾಠಶಾಲೆಯಿಂದ ಪಡೆದಿರಬೇಕು.

***ಸೂಚನೆ:–***
ಯಾವುದೇ ವೇದವಿಭಾಗದಲ್ಲಿ ಪ್ರವೇಶ ಮಾಡುವಾಗ ಆ ವೇದದಲ್ಲಿಯೇ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರಬೇಕು.

I) ***ಆಂತರಿಕ ಪರೀಕ್ಷೆ:–***

1. ಕೇವಲ ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳಲ್ಲಿ 20 ಅಂಕಗಳ ಆಂತರಿಕ ಪರೀಕ್ಷೆ ಇರುತ್ತದೆ.
2. ಖಾಸಗಿ ಪರೀಕ್ಷೆ ಬರೆಯುವವರು ನೇರವಾಗಿ ವಿಶ್ವವಿದ್ಯಾಲಯಕ್ಕೆ ತಮ್ಮ ಹೆಸರು ಮತ್ತು ನೋಂದಣಿ ಪತ್ರ ಸಂಖ್ಯೆ ನಮೂದಿಸುವುದರೊಂದಿಗೆ ಆಯಾ ವಿಷಯದಲ್ಲಿ 10 ಪುಟಗಳ ಪ್ರಬಂಧವನ್ನು ಸಿದ್ಧಪಡಿಸಿ ನೇರವಾಗಿ ವಿಶ್ವವಿದ್ಯಾಲಯ ಪರೀಕ್ಷಾ ಮುಖ್ಯಸ್ಥರಿಗೆ ಸಲ್ಲಿಸುವುದು. ವಿಳಂಬವಾದಲ್ಲಿ ಈ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ. ಈ ಅಂಕಗಳನ್ನು ಪ್ರತ್ಯೇಕವಾಗಿ ಅಂಕಪಟ್ಟಿಗಳಲ್ಲಿ ನಮೂದಿಸಲಾಗುವುದಿಲ್ಲ.

II) ***ವಾರ್ಷಿಕ ಪರೀಕ್ಷೆ***

1. ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಶಾಸ್ತ್ರ ಭಾಗಕ್ಕೆ 100 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ 35 ಅಂಕಗಳು ಉತ್ತೀರ್ಣತೆಯ ಮಾನದಂಡವಾಗಿರುತ್ತದೆ.
   35 ರಿಂದ 49 – ಉತ್ತೀರ್ಣ
   50 ರಿಂದ 59 – ದ್ವಿತೀಯ ಶ್ರೇಣಿ
   60 ರಿಂದ 74 – ಪ್ರಥಮ ಶ್ರೇಣಿ
   75 ರಿಂದ 100– ವಿಶಿಷ್ಟ ಶ್ರೇಣಿ
2. ಈ ಪರೀಕ್ಷೆಗಳಲ್ಲಿ ಅನುತ್ತೀರ್ಣವಾದ ಪತ್ರಿಕೆಗಳನ್ನೆ ಉಳಿಕೆ ವಿಷಯ ಮುಂದುವರೆಸುವ (Carry Over) ಪದ್ಧತಿಯಲ್ಲಿ ಮುಂದಿನ ವರ್ಷದ ವ್ಯಾಸಂಗವನ್ನು ಮುಂದುವರೆಸಿ, ಪರೀಕ್ಷೆ ಬರೆಯುವ ಅವಕಾಶವಿರುತ್ತದೆ.
3. ಯಾವುದೇ ವರ್ಷದಲ್ಲಿ ಒಂದು ಪತ್ರಿಕೆಯಲ್ಲಿ ಅನುತ್ತೀರ್ಣರಾದರೆ ಅಥವಾ ಅನುಪಸ್ಥಿತರಾದರೆ ಅಂತಹವರನ್ನು ಶ್ರೇಣಿ ಪ್ರದಾನಕ್ಕೆ ಪರಿಗಣಿಸುವುದಿಲ್ಲ.
4. ವಿದ್ವನ್ಮಧ್ಯಮಾ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ 01.03.2016ರಂದು ಕನಿಷ್ಠ 17 ವರ್ಷ ಪೂರ್ಣಗೊಂಡಿರಬೇಕು. ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವವರು ಕ್ರಮವಾಗಿ 3 ವರ್ಷಗಳಲ್ಲಿಯೂ ಪರೀಕ್ಷೆಯನ್ನು ಬರೆಯಬೇಕು.
5. ವಿದ್ವದುತ್ತಮಾ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ 01.03.2016ರಂದು ಕನಿಷ್ಠ 20 ವರ್ಷ ಪೂರ್ಣಗೊಂಡಿರಬೇಕು. ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವವರು ಕ್ರಮವಾಗಿ 2 ವರ್ಷಗಳಲ್ಲಿಯೂ ಪರೀಕ್ಷೆಯನ್ನು ಬರೆಯಬೇಕು.
6. ಹೊರರಾಜ್ಯದ ವರ್ಗಾವಣೆ ಪ್ರಮಾಣಪತ್ರವಾದಲ್ಲಿ (ಟ್ರಾನ್ಸಫರ್ ಸರ್ಟಿಫಿಕೇಟ್) ಆ ರಾಜ್ಯದ ಸಂಬಂಧಪಟ್ಟ ವಿದ್ಯಾಧಿಕಾರಿಗಳಿಂದ ಮೇಲುಸಹಿ (ಕೌಂಟರ್‌ಸೈನ್) ಮಾಡಿಸಿರಬೇಕು. ವಲಸೆ ಆಧಾರ ಪ್ರಮಾಣಪತ್ರವನ್ನು ಪಡೆದಿರಬೇಕು.
7. ಪಠ್ಯ ಬದಲಾವಣೆಯಾದಲ್ಲಿ ಹೊಸ ಪಠ್ಯಕ್ಕನುಗುಣವಾಗಿ ಆಯಾ ಪತ್ರಿಕೆಯ ಪರೀಕ್ಷೆಯನ್ನು ಬರೆಯಬೇಕು.
8. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದೇ ಸಂಸ್ಕೃತ ಕಾಲೇಜುಗಳಲ್ಲಿ ಯಾವುದೇ ವಿಭಾಗಕ್ಕೆ ಆ ಸಾಲಿನಲ್ಲಿ ಅಧಿಕೃತ (ಕಾಲೇಜು ವಿದ್ಯಾರ್ಥಿ) ಆಗಿರಬಾರದು
9. ವಿದ್ವದುತ್ತಮಾ ಪರೀಕ್ಷೆಯಲ್ಲಿ ಪ್ರತಿಪತ್ರಿಕೆಯಲ್ಲಿ ಕನಿಷ್ಠ 40 ಅಂಕಗಳನ್ನು ಪಡೆದವರು ಮಾತ್ರ ಉತ್ತೀರ್ಣತೆಯನ್ನು ಹೊಂದುತ್ತಾರೆ.

   40 ರಿಂದ 49 – ಉತ್ತೀರ್ಣ
   50 ರಿಂದ 59 – ದ್ವಿತೀಯ ಶ್ರೇಣಿ
   60 ರಿಂದ 74 – ಪ್ರಥಮ ಶ್ರೇಣಿ
   75 ಕ್ಕಿಂತ ಹೆಚ್ಚು – ವಿಶಿಷ್ಟ ಶ್ರೇಣಿ

**ಸೂಚನೆ:–** ಒಂದು ಶಾಸ್ತ್ರ / ವೇದ ಭಾಗದಲ್ಲಿ ಎಂ.ಎ. ವಿದ್ವದುತ್ತಮಾ ಅಥವಾ ತತ್ಸಮಾನ ಪಾರಂಪರಿಕ ಸ್ನಾತಕೋತ್ತರ ಪದವಿಯನ್ನು ಪಡೆದವರು ಯಾವುದೇ ಶಾಸ್ತ್ರದಲ್ಲಿ ಪ್ರವೇಶ ಪರೀಕ್ಷೆ ಇಲ್ಲದೆ ನೇರವಾಗಿ ಸಂಬಂಧಿಸಿದ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು.

***ಸಾಮಾನ್ಯ ಪ್ರವೇಶ ಪರೀಕ್ಷೆಯ ವಿವರ***

**ಬಿ.ಎ. ವಿದ್ವನ್ಮಧ್ಯಮಾ**

50 ಅಂಕಗಳಿಗೆ – ಸಂಸ್ಕೃತ ಸಾಹಿತ್ಯ ಪಠ್ಯಭಾಗದ ಸಾಮಾನ್ಯ ಜ್ಞಾನ
50 ಅಂಕಗಳಿಗೆ – ಸಂಸ್ಕೃತ ಸಾಹಿತ್ಯ ಪಠ್ಯಭಾಗದ ನ್ಯಾಯ ಮತ್ತು ವ್ಯಾಕರಣ ವಿಷಯ

**ಎಂ.ಎ ವಿದ್ವದುತ್ತಮಾ**

50 ಅಂಕಗಳಿಗೆ – ಸಂಸ್ಕೃತ ಶಾಸ್ತ್ರಭಾಗದ ಸಾಮಾನ್ಯ ಜ್ಞಾನ (ವಸ್ತುನಿಷ್ಠ ಪ್ರಶ್ನೆಗಳು)
50 ಅಂಕಗಳಿಗೆ – ಸಂಬಂಧಿಸಿದ ಶಾಸ್ತ್ರಭಾಗದ ಪ್ರಬಂಧ ರೂಪದ ಪರೀಕ್ಷೆ

# ಪರೀಕ್ಷಾ ಶುಲ್ಕದ ವಿವರ

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣಪತ್ರಗಳು ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 01.1.2016 ಶುಲ್ಕವನ್ನು ಡಿ.ಡಿ. ರೂಪದಲ್ಲಿ ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಈ ವಿಳಾಸಕ್ಕೆ ಸಲ್ಲಿಸುವುದು. ಅಂತಿಮ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

3. ಒಂದು ಮತ್ತು ಎರಡನೇ ವರ್ಷದ ವಿದ್ವನ್ಮಧ್ಯಮಾ/ ವಿದ್ವದುತ್ತಮಾ ಪರೀಕ್ಷಾ ಶುಲ್ಕದ ವಿವರ.

| ಕ್ರ.ಸಂ | ಪರೀಕ್ಷೆಗಳ ವಿವರ | ನೋಂದಣಿ ಶುಲ್ಕ | ಪರೀಕ್ಷೆಯ ಶುಲ್ಕ | ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು |
|---|---|---|---|---|---|---|
| 1. | ಸಂಸ್ಕೃತ/ವೇದ ವಿದ್ವನ್ಮಧ್ಯಮಾ | 850.00 | 320.00 | 10.00 | 20.00 | 1200.00 |
| 2. | ಸಂಸ್ಕೃತ/ವೇದ ವಿದ್ವದುತ್ತಮಾ | 850.00 | 320.00 | 10.00 | 20.00 | 1200.00 |

4. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಮುಖ್ಯ ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಾವತಿಸುವುದು.
5. 2015ನೇ ಸಾಲಿನಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಪ್ರತಿ ವಿಷಯಕ್ಕೆ ಶುಲ್ಕ 200/– ಮಾತ್ರ.
6. ಪ್ರವೇಶ ಪರೀಕ್ಷೆ ಪ್ರಥಮ ವರ್ಷದ ನೋಂದಣಿಗೆ ಮಾತ್ರ ಇರುತ್ತದೆ. ದ್ವಿತೀಯ ವರ್ಷದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಇರುವುದಿಲ್ಲ.
7. ಎಲ್ಲರೂ ನೋಂದಣಿ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸಬೇಕು.
8. ಪ್ರವೇಶ ಪರೀಕ್ಷೆಗೆ ಮತ್ತು ಅಂತಿಮ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಜಾಲತಾಣ (website:www.ksu.ac.in)ದಲ್ಲಿ ಪ್ರಕಟಿಸಲಾಗುವುದು.

s/d
**ಕುಲಸಚಿವರು**

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ, ಬೆಂಗಳೂರು–560 018

**ಬಿ.ಎ. ಮತ್ತು ಎಂ.ಎ ಸಂಸ್ಕೃತ/ವೇದ ಖಾಸಗಿ ಅಭ್ಯರ್ಥಿಗಳ ನೋಂದಣಿಗಾಗಿ ಪ್ರವೇಶ ಪರೀಕ್ಷೆ ಅರ್ಜಿ ನಮೂನೆ**

1) ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ

2) ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ

**ಇತ್ತೀಚಿನ ದೃಢೀಕೃತ ಭಾವಚಿತ್ರ**

ಶಾಸ್ತ್ರಭಾಗ:–

| | | |
|---|---|---|
| 1. | ಅಭ್ಯರ್ಥಿಯ ಹೆಸರು (ಇಂಗ್ಲೀಷ್/ದೇವನಾಗರಿ/ಕನ್ನಡ ಎಸ್ಎಸ್ಎಲ್‌ಸಿ ಅಂಕಪಟ್ಟಿಯಂತೆ) | |
| 2. | ತಂದೆಯ ಹೆಸರು (ಎಸ್ಎಸ್ಎಲ್‌ಸಿ ಅಂಕಪಟ್ಟಿಯಂತೆ) | |
| 3. | ಜನ್ಮದಿನಾಂಕ ದಾಖಲೆ ಒದಗಿಸುವುದು | |
| 4. | ರಾಷ್ಟ್ರೀಯತೆ/ಜಾತಿ | |
| 5. | ಅಂಚೆ ವಿಳಾಸ | |
| 6. | ಮೂಲ ದಾಖಲೆಗಳ ದೃಢೀಕೃತ ಪ್ರತಿಗಳು | 1)<br>2)<br>3)<br>4)<br>5) |

ಸ್ಥಳ:

ದಿನಾಂಕ:

**ಅಭ್ಯರ್ಥಿಯ ಸಹಿ**

1. **'ಹಣಕಾಸು ಅಧಿಕಾರಿಗಳು'** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರ ಹೆಸರಿಗೆ ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಡೆದು ನಿಗದಿತ ದಿನಾಂಕದೊಳಗೆ ಅರ್ಜಿಯೊಂದಿಗೆ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018 ಈ ವಿಳಾಸಕ್ಕೆ ಸಲ್ಲಿಸುವುದು.

2. **ನೋಂದಣಿ ಪ್ರವೇಶ ಶುಲ್ಕ ರೂ. –** ಡಿ.ಡಿ. ಸಂಖ್ಯೆ:......................................ದಿನಾಂಕ................................